





ತಮಗಿರುವ ಭಾವನಾತ್ಮಕ ಸಂಬಂಧಗಳನ್ನು ತೋರಿಸಲು ಈ ತರಹದ ಆಭರಣಗಳು ಟ್ರೆಂಡಿಯಾಗಿವೆ. ಇದರ ಹೊರತಾಗಿ ಕೆಲ ವ್ಯಕ್ತಿಗಳ ಮೇಲೆ ತಮಗಿರುವ ಭರವಸೆ, ಕನಸುಗಳನ್ನು ತೋರಿಸಲು ಕೂಡ ಈ ತರಹದ ಆಭರಣಗಳು ಸಹಾಯಕವಾಗಿವೆ.

ತಾವು ಮಾಡುವ ಯಾವುದೇ ಮಹತ್ಕಾರ್ಯಗಳ ಸಾಧನೆ, ಗುರಿಯ ಸಂಕೇತವಾಗಿ ವ್ವಿ (ವಿಕ್ಟರಿ) ವರ್ಣಮಾಲೆಯ ಆಭರಣಗಳಾದ ಉಂಗುರ ಹಾಗೂ ಲಾಕೆಟ್ ಕೂಡ ಧರಿಸುತ್ತಿದ್ದಾರೆ. ಇನ್ನು ಮದುವೆ ಸೀಜನ್ ಪ್ರಾರಂಭವಾದರೆ ಸಾಕು ಎಲ್ಲಿ ನೋಡಿದರೂ ಈ ಅಕ್ಷರದ ಆಭರಣಗಳದ್ದೇ ಸುದ್ದಿ. ಮದುಮಗಳಿಂದ ಹಿಡಿದು ಮದುವೆಯ ಶುಭ ಕಾರ್ಯಕ್ಕೆ ಆಗಮಿಸುವ ಎಲ್ಲ ಮಹಿಳೆಯರೂ ತಾವು ಧರಿಸುವ ಗ್ರ್ಯಾಂಡ್ ಲುಕ್ ನೀಡುವ ಜರಿ ಸೀರೆಗಳು, ಹೆವಿ ಪಲ್ಲು ಬಾರ್ಡರ್ ಸೀರೆಗಳು ಹಾಗೇ ವಿವಿಧ ರೀತಿಯ ರೇಷ್ಮೆ ಸೀರೆಗಳ ಮೇಲೆ ಬಂಗಾರದ ಇಲ್ಲವೇ ಬೆಳ್ಳಿಯ ಹೆವಿ ಪೆಂಡೆಂಟ್ ಮೇಲೆ ಅಕ್ಷರಗಳಿರುವ ನೆಕ್ಲೇಸ್ ತೊಟ್ಟು ಮಿಂಚುತ್ತಿದ್ದಾರೆ. ಇದಕ್ಕೆ ಮ್ಯಾಚ್ ಆಗುವ ಅಕ್ಷರದ ಉಂಗುರ ಮತ್ತು ಬ್ರೇಸ್ಲೆಟ್‌ಗಳನ್ನು ತೊಡುತ್ತಿದ್ದಾರೆ. ಈ ತರಹದ ಒಡವೆಗಳು ಟ್ರೆಡಿಷನಲ್ ಉಡುಪುಗಳಿಗೂ ಹಾಗೂ ಮಾಡರ್ನ್ ಉಡುಪುಗಳಿಗೂ ಸಖತ್ತಾಗಿ ಮ್ಯಾಚ್ ಆಗುತ್ತಿವೆ.

ಒಂದು ಎಳೆ ಅಥವಾ ಎರಡು ಎಳೆ ಮಾಂಗಲ್ಯ ಸರದಲ್ಲಿ ಮದುಮಗನ ಹೆಸರನ್ನು ಹಾಕಿಸಿ ಧರಿಸುವುದು ಕೂಡ ಇಂದಿನ ಟ್ರೆಂಡ್. ಯುವತಿಯರಂತೂ ತಾವು ಹೋಗುವ ಯಾವುದೇ ಶುಭ ಸಮಾರಂಭವಿರಲಿ ಇಲ್ಲವೇ ಕಾಲೇಜ್ ಡೇ ಫಂಕ್ಷನ್ ಇರಲಿ, ಇಲ್ಲವೇ ಔಟಿಂಗ್ ಇರಲಿ, ತಾವು ಧರಿಸುವ ಸೀರೆ, ಗೌನ್, ಗಾಗ್ರಾ, ಜೀನ್ಸ್ ಮುಂತಾದ ಎಲ್ಲಾ ಉಡುಪುಗಳ ಜೊತೆ ಸಖತ್ತಾಗಿ ಮ್ಯಾಚ್ ಆಗುವ ಈ ತರಹದ ಅಕ್ಷರಗಳಿರುವ ಆಭರಣಗಳನ್ನು ಧರಿಸಿ ಮಿಂಚುತ್ತಿದ್ದಾರೆ.

ಚಿನ್ನದ ಸರದ ಜೊತೆಗೆ ಅಕ್ಷರಗಳಿರುವ ದೊಡ್ಡ ಪೆಂಡೆಂಟ್ ಸಾಕಷ್ಟು ಟ್ರೆಂಡಿಯಾಗಿದೆ. ಫ್ಯಾಷನಿಸ್ಟ್‌ಗಳು ಇದೀಗ ಬರೀ ಚಿನ್ನದ ಸರದ ಬದಲಾಗಿ ಬಿಳಿ ಹರಳುಗಳನ್ನು ಅಳವಡಿಸಿದ ಪೆಂಡೆಂಟ್‌ಗಳನ್ನು ಹಾಗೂ ಬ್ರೇಸ್ಲೆಟ್‌ಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಒಂದು ಎಳೆ, ಎರಡು ಎಳೆ ಹಾಗೂ ಮೂರು ಎಳೆಯ ಗೋಲ್ಡ್ ಹಾಗೂ ಸಿಲ್ವರ್ ಚೇನ್‌ಗಳ ಮೇಲೆ ಅಕ್ಷರಗಳನ್ನು ಅಳವಡಿಸಿದ ಸರ ಧರಿಸುತ್ತಿದ್ದಾರೆ. ಪೆಂಡೆಂಟ್ ಇದೀಗ ಯುವತಿಯರ ಹಾಟ್ ಫೇವರೆಟ್ ಎಂದೇ ಹೇಳಬಹುದು.

ಅವರವರ ಅಭಿರುಚಿಗೆ ತಕ್ಕಂತೆ ಕಸ್ಟಮೈಸ್ ಮಾಡಿಸಬಹುದಾದ ಮತ್ತು ತಮ್ಮ ಪ್ರೀತಿ ಪಾತ್ರರಾದವರಿಗೆ ಉಡುಗೊರೆ ನೀಡಲು ಕೂಡ ಅತ್ಯಂತ ಯೋಗ್ಯವಾದ ಈ ತರಹದ ಆಭರಣಗಳ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಿದೆ. ಮೊದಲೆಲ್ಲಾ ಬರೀ ಗೋಲ್ಡ್, ಸಿಲ್ವರ್‌ನಲ್ಲಿ ಮಾತ್ರ ದೊರೆಯುತ್ತಿದ್ದ ಈ ತರಹದ ಆಭರಣಗಳು ಇತ್ತೀಚೆಗೆ ಸಾಮಾನ್ಯರಿಗೂ ಕೈಗೆಟುಕುವ ದರದಲ್ಲಿ ಸಿಲ್ವರ್, ಹಿತ್ತಾಳೆ, ತಾಮ್ರ, ಪಂಚಲೋಹಗಳಲ್ಲಿ ತಯಾರಾಗಿ ಫ್ಯಾನ್ಸಿ ಸ್ಟೋರ್‌ಗಳಲ್ಲಿ ದೊರೆಯುತ್ತಿವೆ. ಹೀಗೆ ಅನೇಕ ಲೋಹಗಳಿಂದ ತಯಾರಾದ ಸುಂದರವಾದ ಅಕ್ಷರಗಳುಳ್ಳ ಉಂಗುರ, ಬ್ರೇಸ್ಲೆಟ್‌ಗಳು, ಸರ, ಕಿವಿಯೋಲೆಗಳನ್ನು ಉಡುಪಿಗೆ ಅನುಗುಣವಾಗಿ ಮ್ಯಾಚ್ ಮಾಡಿ ಧರಿಸಬಹುದು.

ಯುವತಿಯರು ಅತ್ಯಂತ ಸಣ್ಣ ಎಳೆಯ ಸರಗಳನ್ನು ಧರಿಸುತ್ತಿದ್ದಾರೆ. ಈ ಸರದಲ್ಲಿ ಹಾರ್ಟ್ ವಿನ್ಯಾಸದ ಒಳಗೆ ಅಕ್ಷರವಿರುವ ಪುಟ್ಟದಾದ ಲಾಕೆಟ್ ಇತ್ತೀಚೆಗೆ ಟ್ರೆಂಡಿಯಾಗಿದೆ. ಈ ತರಹದ ಸರಗಳು ಯಾವುದೇ ತರಹದ ಮಾಡ್ ಡ್ರೆಸ್‌ಗಳ ಮೇಲೆ ಸಖತ್ತಾಗಿ ಕಾಣುತ್ತವೆ. ■